**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಇಂಡಿ**

**ಸಿಸಿ. ನಂ:2633/2019**

**ಪಿ.ಡಬ್ಲ್ಯು- 1**

**ದಿ:09-06-2025 ರ ಮೇರೆಗೆ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕೆ.ಐ.ಜೆ. ಆರೋಪಿ ಪರ ವಕೀಲರಿಂದಃ**

ಆರೋಪಿಯ ಪೂರ್ತಿ ಹೆಸರು ಸಿದ್ದಪ್ಪ ತಂದೆ ಲಕ್ಷ್ಮಣ ಪಾಟೀಲ. ಸದರಿ ಆರೋಪಿಯ ವಿಳಾಳ ಮಹಾಲಿಂಗಪೂರ ಇರುತ್ತದೆ ಆದರೆ ಆತನ ಪೂರ್ತಿ ವಿಳಾಸವನ್ನು ನನಗೆ ಹೇಳಲು ಬರುವುದಿಲ್ಲ. ನನಗೆ ಆರೋಪಿಯು ನನ್ನ ಬಿಗರಾದ ಬಸವರಾಜ ಜಲಪುರ ಇವರ ಕಡೆಯಿಂದ ಪರಿಚಯ ಆಗಿರುತ್ತಾರೆ. ಆರೋಪಿಯ ಮನೆತನ ಮತ್ತು ಆಸ್ತಿಯ ಬಗ್ಗೆ ನನಗೆ ಸ್ವಂತಕ್ಕೆ ಮಾಹಿತಿ ಇಲ್ಲ. ಆರೋಪಿಯ ಶಿಕ್ಷಣ ಏನು ಆಗಿರುತ್ತದೆ ಎಂದು ನನಗೆ ಮಾಹಿತಿ ಇಲ್ಲ. ಆರೋಪಿಯನ್ನು ನಾನು ಮೊದಲ ಸಲ ನ್ಯಾಯಾಲಯಕ್ಕೆ ಬಂದಾಗ ನೋಡಿರುತ್ತೇನೆ ಎಂದರೆ ಸರಿ. ನಾನು ಆರೋಪಿಯ ಜೊತೆ ಮೊದಲು ವ್ಯವಹಾರ ಮಾಡಿರುತ್ತೇನೆ. ಆರೋಪಿಯ ಅಕ್ಕಪಕ್ಕ ಮನೆ ಯಾರದು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಹಣವನ್ನು ಕೇಳಲು ದೇವರನಿಂಬರಗಿ ಗ್ರಾಮಕ್ಕೆ ಬಂದಿದ್ದನು. ಆ ದಿನ ಆರೋಪಿ ಮತ್ತು ಬಸವರಾಜ ಇವರು ಹಣವನ್ನು ಕೇಳಲು ಬಂದಿದ್ದರು. 2018 ನೇ ಇಸವಿಯಲ್ಲಿ ಆರೋಪಿಯು ಹತ್ತು ಲಕ್ಷ ಹಣವನ್ನು ಕೇಳಲು ಬಂದಿದ್ದರು ಆದರೆ ತಿಂಗಳು ನನಗೆ ಗೊತ್ತಿಲ್ಲ. ಆರೋಪಿಯು ಹಣವನ್ನು ಕೇಳಲು ಬಂದಾಗ ನನ್ನ ಬಳಿ ಹಣವಿರಲಿಲ್ಲ 15 ದಿನದ ನಂತರ ಅವರಿಗೆ ಹಣವನ್ನು ನೀಡಿರುತ್ತೇನೆ. ನಾನು ಹೊಲವನ್ನು ಮಾರಾಟ ಮಾಡಿ ಆರೋಪಿಗೆ ಹಣವನ್ನು ನೀಡಿರುತ್ತೇನೆ. ಸದರಿ ಖರೀದಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನಗೆ ಹಣ ಬಂದ ನಂತರ ನಾನು ಆರೋಪಿಗೆ ಪೋನನ್ನು ಮಾಡಿರುವುದಿಲ್ಲ ಆದರೆ ಆರೋಪಿಯೇ ನನಗೆ ಪೋನ್ ಮಾಡಿ ಹಣ ಬೇಡಿರುತ್ತಾರೆ. ನನಗೆ ಆರೋಪಿಗೆ ಯಾವ ತಾರೀಖಿನಂದು ಹಣವನ್ನು ನೀಡಿರುತ್ತೇನೆ ಎಂದು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ. ಹಣವನ್ನು ತೆಗೆದುಕೊಂಡು ಹೋಗಲು ಆರೋಪಿ ಮತ್ತು ಬಸವರಾಜ ಇಬ್ಬರು ಬಂದಿದ್ದರು. ಬಸವರಾಜ ಜಲಪೂರೆ ಇವರನ್ನು ನ್ಯಾಯಾಲಯದಲ್ಲಿ ಸಾಕ್ಷಿ ಮಾಡಿಸಲು ನನಗೆ ತೊಂದರೆ ಇಲ್ಲ. ನಾನು 500 ಮುಖಬೆಲೆಯ ನೋಟುಗಳನ್ನು ಆರೋಪಿಗೆ ನೀಡಿರುತ್ತೇನೆ ಆದರೆ ಎಷ್ಟು ನೋಟುಗಳು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿ ನನಗೆ ಸಂಬಂಧಿಕನು ಇರುವುದಿಲ್ಲ. ನಾನು

-2-

ಆರೋಪಿಗೆ ಬಡ್ಡಿ ಇಲ್ಲದೇ ಸಾಲವನ್ನು ನೀಡಿರುತ್ತೇನೆ. ಆರೋಪಿಯು ಯಾವ ಕಾರಣಕ್ಕಾಗಿ ಹಣ ಬೇಕಾಗಿರುತ್ತದೆ ಎಂದು ಕೇಳಿರುತ್ತಾರೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಡಚಣೆ ಸಲುವಾಗಿ ಬೇಕಾಗಿರುತ್ತದೆ

ಎಂದು ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಏನು ಉದ್ಯೋಗ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಆರೋಪಿಗೆ ಹಣವನ್ನು ನೀಡುವಾಗ ಭದ್ರತೆ ಎಂದು ಯಾವುದೇ ದಾಖಲೆಗಳನ್ನು ಪಡೆದಿರುವುದಿಲ್ಲ. ಆರೋಪಿಗೆ ಹಣವನ್ನು ನೀಡಿದ ದಿನ ಆರೋಪಿ ಕಡೆಯಿಂದ ಪಾವತಿಯನ್ನು ಬರೆಸಿಕೊಂಡಿರುವುದಿಲ್ಲ. ಆರೋಪಿಯು ನನಗೆ ಚೆಕ್ಕನ್ನು ತಂದು ನೀಡಿರುತ್ತಾನೆ ಆದರೆ ನನಗೆ ನಿಖರವಾದ ದಿನಾಂಕ ಗೊತ್ತಿಲ್ಲ. ಆರೋಪಿಯು ಚೆಕ್ಕನ್ನು ನನ್ನ ಸಮಕ್ಷಮ ಬರೆದಿರುವುದಿಲ್ಲ. ಆರೋಪಿಯು ಬೇರೆ ಕಡೆಯಿಂದ ಚೆಕ್ಕನ್ನು ಬರೆದುಕೊಂಡು ನನಗೆ ತಂದು ನೀಡಿರುತ್ತಾನೆ. ನಿ.ಪಿ.1 ರಲ್ಲಿ ಇರುವ ಅಕ್ಷರಗಳು ಮತ್ತು ಚೆಕ್ಕಿನ ಜೊತೆ ಸಲ್ಲಿಸಲಾದ ಮೆಮೊದ ಅಕ್ಷರಗಳು ಬೇರೆ ಬೇರೆ ಇರುತ್ತವೆ. ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ 4 ಎಕರೆ ಜಮೀನು ಇರುತ್ತದೆ. ನನ್ನ ಹೆಸರಿನಲ್ಲಿ ಜಮೀನು ಇರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಜಮೀನಿನಲ್ಲಿ ತೊಗರಿ, ಕಬ್ಬು, ಮೆಕ್ಕೆಜೋಳಗಳನ್ನು ಬೆಳೆಯುತ್ತೇವೆ. ಸದರಿ ಕಬ್ಬನ್ನು ಹಾವಿನಾಳ ಸಕ್ಕರೆ ಕಾರ್ಖಾನೆಗೆ ಕಳುಹಿಸುತ್ತೇನೆ. ಸದರಿ ಕಬ್ಬಿನ ಬಿಲ್ಲುಗಳು ಬ್ಯಾಂಕಿಗೆ ಜಮಾ ಆಗುತ್ತವೆ. ಸದರಿ 4 ಎಕರೆ ಜಮೀನಿನಲ್ಲಿ ವಾರ್ಷಿಕ ಆದಾಯ ನಾಲ್ಕು ಲಕ್ಷ ಇರುತ್ತದೆ. ಖರ್ಚು ವರ್ಷಕ್ಕೆ ಐವತ್ತು ಸಾವಿರ ಇರುತ್ತದೆ. ನನ್ನ ಬ್ಯಾಂಕ ಸ್ಟೇಟಮೆಂಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ.

**ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಸಹಿ/-**

**ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.ಇಂಡಿ.**